**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.**

**ಪತ್ರಿಕಾ ಪ್ರಕಟಣೆ**

**ಬಿ. ಇ. ಮತ್ತು ಡಿಪ್ಲೋಮೊ ವಿದ್ಯಾರ್ಥಿಗಳಿಗೆ ಅಪ್ರೆಂಟಿಶಿಪ್ ತರಬೇತಿಗಾಗಿ ಸಂದರ್ಶನ**

ಇವರಿಗೆ,

ನಿರ್ದೇಶಕರು,
ವಾರ್ತಾ ಇಲಾಖೆ,
ನಂ.17, ಭಗವಾನ್ ಮಹಾವೀರ್ ಜೈನ್ ರಸ್ತೆ,
(ಇನ್‌ಫೆಂಟ್ರಿ ರಸ್ತೆ),ಬೆಂಗಳೂರು-560 001.

ಮಾನ್ಯರೇ,

ವಿಷಯ: ಬಿ.ಇ. ಮತ್ತು ಡಿಪ್ಲೋಮೊ ವಿದ್ಯಾರ್ಥಿಗಳಿಗೆ ಒಂದು ವರ್ಷದ ಶಿಶಿಕ್ಷು ತರಭೇತಿಗಾಗಿ ಸಂದರ್ಶನ.

-0-

ಕೇಂದ್ರ ಸರ್ಕಾರ ಅಪ್ರೆಂಟಿಶಿಪ್ (ಅಮೆಂಡ್‌ಮೆಂಟ್) ಆಕ್ಟ್ 1973ರ ಪ್ರಕಾರ ಒಂದು ವರ್ಷದ ಅಪ್ರೆಂಟಿಶಿಪ್ ತರಬೇತಿಗಾಗಿ ಬಿ.ಇ. ಮತ್ತು ಡಿಪ್ಲೋಮೊದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ವಿವಿಧ ಉದ್ದಿಮೆಗಳಲ್ಲಿ, ಒಂದು ವರ್ಷದ ಶಿಶಿಕ್ಷು ತರಬೇತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ಸಂದರ್ಶನ ಮತ್ತು ಆಯ್ಕೆಯನ್ನು ನಿರ್ದೇಶಕರು, ಬೋರ್ಡ್ ಆಫ್ ಅಪ್ರೆಂಟಿಷಿಪ್ ಟ್ರೈನಿಂಗ್, ಚೆನ್ನೈ ಮತ್ತು ಪ್ರಿನ್ಸಿಪಾಲರು, **ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್,ಶೇಷಾದ್ರಿ ರಸ್ತೆ, ಬೆಂಗಳೂರು** ಇವರ ಸಹಯೋಗದೊಂದಿಗೆ ದಿನಾಂಕ: 06/08/2013 ಮತ್ತು ದಿನಾಂಕ: 07-06-2013 ರಂದು ನಡೆಸಲಾಗುವುದು. ಈ ಸಂದರ್ಶನದಲ್ಲಿ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಉದ್ದಿಮೆಗಳು ಭಾಗವಹಿಸುತ್ತವೆ.

**ಸಂದರ್ಶನ ಸ್ಥಳ: ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು – 560 001,**

**ದೂರವಾಣಿ: 080-22343031**

**ಅಭ್ಯರ್ಥಿಗಳ ಸಂದರ್ಶನ ಮತ್ತು ಆಯ್ಕೆಯ ವಿವರ ಕೆಳಗೆ ನಮೂದಿಸಲಾಗಿದೆ.**

| ದಿನಾಂಕ | ಸಮಯ | ಕೋರ್ಸ್ | ವಿಷಯಗಳ ವಿವರ |
|---|---|---|---|
| 06-08-2013 | ಬೆಳಿಗ್ಗೆ 10.00 ರಿಂದ ಅಪರಾಹ್ನ 1.30ರವರೆಗೆ<br>ಅಪರಾಹ್ನ 2.00 ರಿಂದ ಅಪರಾಹ್ನ 5.30ರವರೆಗೆ | ಡಿಪ್ಲೋಮಾ | ಎಲ್ಲಾ ವಿಷಯಗಳ ಅಭ್ಯರ್ಥಿಗಳು |
| 07-08-2013 | ಬೆಳಿಗ್ಗೆ 10.00 ರಿಂದ ಅಪರಾಹ್ನ 1.30ರವರೆಗೆ<br>ಅಪರಾಹ್ನ 2.00 ರಿಂದ ಅಪರಾಹ್ನ 5.30ರವರೆಗೆ | ಇಂಜಿನಿಯರಿಂಗ್ | ಎಲ್ಲಾ ವಿಷಯಗಳ ಅಭ್ಯರ್ಥಿಗಳು |

**ಸೂಚನೆಗಳು:**

1) ಅಭ್ಯರ್ಥಿಗಳು ಸಂಬಂಧಿಸಿದ ಕೋರ್ಸಿನಲ್ಲಿ 2010ರ ಆಗಸ್ಟ್ ನಂತರ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸಂದರ್ಶನಕ್ಕೆ ಅರ್ಹರಾಗಿರುತ್ತಾರೆ.

2) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಮೂಲ ಎಸ್.ಎಸ್.ಸಲ್.ಸಿ/ಡಿಪ್ಲೋಮೊ/ಬಿ.ಇ ಮಾರ್ಕ್ಸ್ ಕಾರ್ಡ್ ಮತ್ತು ಅಂತಿಮವಾಗಿ ನೀಡುವ ಪ್ರಾವಿಜನಲ್ ಸರ್ಟಿಫಿಕೇಟ್‌ನೊಂದಿಗೆ ಹಾಜರಾಗತಕ್ಕದ್ದು.

3) ತರಭೇತಿಯು ಒಂದು ವರ್ಷದ ಅವಧಿಯಾಗಿದ್ದು, ತರಭೇತಿಯ ಅವಧಿಯಲ್ಲಿ ಬಿ.ಇ ಅಭ್ಯರ್ಥಿಗಳಿಗೆ ಮಾಸಿಕ ರೂ. 3,560/- ಮತ್ತು ಡಿಪ್ಲೋಮೊ ಅಭ್ಯರ್ಥಿಗಳಿಗೆ ಮಾಸಿಕ ರೂ.2,530/- ರಂತೆ ಶಿಶಿಕ್ಷು ವೇತನವನ್ನು ನೀಡಲಾಗುವುದು.

ಪ್ರಯುಕ್ತ ಅರ್ಹ ಅಭ್ಯರ್ಥಿಗಳು ಮೇಲ್ಕಂಡ ಸಂದರ್ಶನದಲ್ಲಿ ಭಾಗವಹಿಸಿ ಶಿಶಿಕ್ಷು ತರಭೇತಿಯ ಪ್ರಯೋಜನ ಪಡೆಯಬೇಕೆಂದು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ.

ಜಂಟಿ ನಿರ್ದೇಶಕರು (ಎಲ್‌ಸಿಎಸ್)
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು